
ಕತ್ತಲೇ ಅಲ್ಲಿ ಪ್ರಕಾಶ
ಇದ ನೋಡಲಾಗದೆ ಕಣ್ಣ ಮುಚ್ಚುತ್ತಿರುವೆ
ಆದರೂ ಸ್ವಪ್ನದ ಗವಾಕ್ಷಿಯೊಂದು
ತೆರೆದೇ ಇರುತ್ತದೆ ಎಂದೆಂದೂ
ಅದಕ್ಕೆ ಮುಚ್ಚಳವೆ ಇಲ್ಲ! ಅದೂ ಎಂಥ ಭಾಗ್ಯ!



# ಇನ್ಫಿನಿಟಿ

ಓದಿದ್ದೇವೆ ಕೇಳಿದ್ದೇವೆ
ಇನ್ಫಿನಿಟಿ ಬಗ್ಗೆ ಸಾಕಷ್ಟು
ಆದರೂ ನಮಗೆ ಸ್ಪಷ್ಟವಾಗಿಲ್ಲ
ಇನ್ಫಿನಿಟಿ ಎಂದರೆ ಏನೆಂದು

ಇನ್ಫಿನಿಟಿ ಎಂದರೆ ಲೆಕ್ಕದಂತೆ
ಒನ್ ಟೂ ತ್ರೀ... ಅಂತ
ಎಣಿಸಿದಷ್ಟೂ ಮುಗಿಯದು
ಮುಗಿಯೋದು ಬರೇ ಆಯುಶ್ಯ

ಇನ್ಫಿನಿಟಿಯಲ್ಲಿ ಏನು ಬೇಕಾದರೂ
ಆಗಬಹುದು ಅಂತಾರೆ

ಸಮಾನಾಂತರ ಲೈನುಗಳು
ಒಂದನ್ನೊಂದು ಕೂಡಬಹುದು

ಫಿನಿಟಿಯಲ್ಲಿ ಏನೆಲ್ಲ
ಅಸಾಧ್ಯವೋ ಅದು ಎಲ್ಲ
ಇನ್ಫಿನಿಟಿಯಲ್ಲಿ
ಆಗಬಹುದು

ಇನ್ಫಿನಿಟಿ ಇದ್ದುದರಿಂದಲೆ
ನೋಡಿ ಆ ಬೀದಿ ನಾಯಿ ಸಹಾ
ಹೇಗೆ ಹೋಗುತ್ತಿದೆ
ಗಂಭೀರವಾಗಿ